**BSE LIMITED**
**NATIONAL STOCK EXCHANGE OF INDIA LIMITED**

May 31, 2024

Dear Sir/ Madam,

**Sub: Newspaper advertisement titled 'Notice of the 43rd Annual General Meeting to be held over video conference, record date, final and special dividend information'**

Please find enclosed copies of the newspaper advertisement titled 'Notice of the 43rd Annual General Meeting to be held over video conference, record date, final and special dividend information'. The advertisements appeared in today's Business Standard (English) and Prajavani (Kannada).

This is for your information and records.

This will also be hosted on the Company's website, at www.infosys.com

Yours Sincerely,
For **Infosys Limited**

SURYANARAYANA ANUR GURUGOPALA RAJU MANIKANTHA
Digitally signed by SURYANARAYANA ANUR GURUGOPALA RAJU MANIKANTHA
Date: 2024.05.31 17:49:08 +05'30'

**A.G.S. Manikantha**
*Company Secretary*

**INFOSYS LIMITED**
CIN: L85110KA1981PLC013115
44, Infosys Avenue
Electronics City, Hosur Road
Bengaluru 560 100, India
T 91 80 2852 0261
F 91 80 2852 0362
investors@infosys.com
www.infosys.com

Infosys®
Navigate your next
**Infosys Limited**
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

## NOTICE OF THE 43rd ANNUAL GENERAL MEETING TO BE HELD OVER VIDEO CONFERENCE, RECORD DATE, FINAL AND SPECIAL DIVIDEND INFORMATION

1. Shareholders may note that the 43rd Annual General Meeting (AGM) of the Company will be held over video conference and other audio visual means (VC) on Wednesday, June 26, 2024, at 4:00 p.m. IST in compliance with General Circular 09/2023 dated September 25, 2023 issued by the Ministry of Corporate Affairs (MCA) and SEBI/HO/CFD/PoD-2/P/CIR/2023/167 dated October 7, 2023 issued by SEBI (hereinafter collectively referred to as "the Circulars") and all other applicable laws, to transact the business that will be set forth in the Notice of the Meeting.
2. In compliance with the above circulars, electronic copies of the Notice of the AGM and Integrated Annual Report for the financial year 2023-24 will be sent to all the shareholders whose email ids are registered with the Company/Depository Participant(s). Shareholders holding shares in dematerialized mode, are requested to register their email id and mobile numbers with their relevant depositories through their depository participants and shareholders holding shares in physical mode are requested to furnish details to the Company's Registrar and Share Transfer Agent ("RTA"), KFin Technologies Limited, at einward.ris@kfintech.com. Notice of the 43rd AGM and Integrated Annual Report 2023-24 will also be made available on the Company's website, at www.infosys.com, stock exchange websites and on the NSDL's website, at https://www.evoting.nsdl.com
3. Shareholders who have not registered their email address will have an opportunity to cast their vote remotely on the business as set forth in the Notice of the AGM through remote e-voting or through e-voting system during the AGM. The manner of voting remotely for shareholders holding shares in dematerialized and physical mode will be provided in the Notice to the shareholders.
4. Shareholders may note that the Board of Directors, at its meeting, held on April 18, 2024, has recommended a final dividend of ₹20/- per equity share for the financial year ended March 31, 2024 and additionally, a special dividend of ₹8/- per equity share. The record date for the purpose of final and special dividend is May 31, 2024. The final and special dividend, once approved by the shareholders in the ensuing AGM, will be paid on July 01, 2024 through various modes. To avoid delay in receiving dividend, shareholders are requested to update their KYC with their depositories (where shares are held in dematerialized mode) and with the RTA (where shares are held in physical mode) to receive dividend directly into their bank account on the payout date.
5. Shareholders whose shareholding is in electronic mode are requested to notify any change in address or bank account details to their respective depository participant(s). Shareholders whose shareholding is in physical mode are requested to opt for the Electronic Clearing System (ECS) mode to receive dividend on time, in line with the Circulars. We urge shareholders to utilize the ECS for receiving dividends.
6. Shareholders who wish to register their email address/bank account mandate may follow the below instructions:

| | |
|---|---|
| **Dematerialized Holding** | Register / update the details in your demat account, as per the process advised by your Depository Participant. |
| **Physical Holding** | Register/update the details in the prescribed Form ISR-1 and other relevant forms with RTA of the Company, KFin Technologies Limited, at einward.ris@kfintech.com<br>Shareholders may download the prescribed forms from the Company's website at https://www.infosys.com/investors/shareholder-services/investors-service.html<br>Shareholders may also refer to Frequently Asked Questions ("FAQs") on the Company's website at https://www.infosys.com/investors/shareholder-services/faqs.html |

7. Shareholders may note that the Income-tax Act, 1961, ("the IT Act") as amended by the Finance Act, 2020, mandates that dividend paid or distributed by the Company on or after April 01, 2020 shall be taxable in the hands of shareholders. The Company shall therefore be required to deduct tax at source ("TDS") at the time of making the payment of final and special dividend. In order to enable us to determine the appropriate TDS rate as applicable, shareholders are requested to submit relevant documents, as specified in the below paragraphs, in accordance with the provisions of the IT Act.

   **For resident shareholders,** taxes shall be deducted at source under Section 194 of the IT Act, as follows:

| | |
|---|---|
| Shareholders having valid Permanent Accounting Number (PAN) | 10%* or as notified by the Government of India |
| Shareholders not having PAN / valid PAN | 20% or as notified by the Government of India |

   * As per the Finance Act, 2021, Section 206AB has been inserted effective July 01, 2021, wherein the higher rate of tax (twice the specified rate) would be applicable on payment made to a shareholder who is classified as 'Specified Person' as defined under the provisions of the aforesaid Section.

   * As per Section 139AA of the IT Act, every person who has been allotted a PAN and is eligible to obtain Aadhaar, shall be required to link the PAN with Aadhaar. In case of failure to comply with this, the PAN allotted shall be deemed to be invalid / inoperative and he shall be liable to all consequences under the Act and tax shall be deducted at the higher rates as prescribed under the Act.

   However, no tax shall be deducted on the dividend payable to a resident individual shareholder if the total dividend to be received by them during financial year 2023-24 does not exceed ₹5,000/-, and also in cases where shareholders provide Form 15G / Form 15H (Form 15H is applicable to resident individual shareholders aged 60 years or more), subject to conditions specified in the IT Act. Resident shareholders may also submit any other document as prescribed under the IT Act to claim a lower /nil withholding of tax. PAN is mandatory for shareholders providing Form 15G / 15H or any other document as mentioned above.

   **For non-resident shareholders,** taxes are required to be withheld in accordance with the provisions of Section 195 and other applicable sections of the IT Act, at the rates in force. The withholding tax shall be at the rate of 20%** (plus applicable surcharge and cess) or as notified by the Government of India on the amount of dividend payable. However, as per Section 90 of the IT Act, non-resident shareholders have the option to be governed by the provisions of the Double Tax Avoidance Agreement (DTAA), read with Multilateral Instrument (MLI) between India and the country of tax residence of the shareholders, if they are more beneficial to them. For this purpose, i.e., to avail the benefits under the DTAA read with MLI, non-resident shareholders will have to provide the following:

   - Copy of the PAN card allotted by the Indian income tax authorities duly attested by the shareholders or details as prescribed under rule 37BC of Income-tax Rules, 1962.
   - Copy of Tax Residency Certificate for the financial year 2023-24 obtained from the revenue or tax authorities of the country of tax residence, duly attested by shareholders.
   - Electronic Form 10F as per notification no. 03/2022 dated July 16, 2022 issued by the Central Board of Direct Tax [Notification can be read under notification-no-3-2022-systems.pdf (incometaxindia.gov.in)]. Form 10F can be obtained electronically through the e-filing portal of the income tax website at https://www.incometax.gov.in/iec/foportal
   - Self-declaration by the shareholders of having no permanent establishment in India in accordance with the applicable tax treaty
   - Self-declaration of beneficial ownership by the non-resident shareholder
   - Any other documents as prescribed under the IT Act for lower withholding of taxes if applicable, duly attested by the shareholders.

   In case of Foreign Institutional Investors ("FII") / Foreign Portfolio Investors ("FPI"), tax will be deducted under Section 196D of the IT Act @ 20%** (plus applicable surcharge and cess) or rate provided in relevant DTAA, read with MLI, whichever is more beneficial, subject to the submission of the above documents, if applicable.

   **As per the Finance Act, 2021, Section 206AB has been inserted effective July 01, 2021, wherein the higher rate of tax (twice the specified rate) would be applicable on payment made to a shareholder who is classified as 'Specified Person' as defined under the provisions of the aforesaid section. However, in case a non-resident shareholder or a non-resident FPI / FII, the higher rate of tax as mentioned in Section 206AB shall not apply if such non-resident does not have a permanent establishment in India.

   The aforementioned documents are required to be uploaded on the shareholder portal at https://www.infosys.com/investors/shareholder-services/dividend-tax.html on or before June 07, 2024. Shareholders are requested to visit https://www.infosys.com/investors/shareholder-services/dividend-tax.html for more instructions and information on this subject. No communication would be accepted from shareholders after June 07, 2024 regarding tax-withholding matters. Shareholders may write to dividend.tax@infosys.com for any clarifications on this subject.

   TDS certificates in respect of tax deducted, if any, can be subsequently downloaded from the shareholder's portal. Shareholders can also check their tax credit in Form 26AS from the e-filing account at https://www.incometax.gov.in/iec/foportal or "View Your Tax Credit" on https://www.tdscpc.gov.in

8. Notice of the 43rd AGM will be sent to the shareholders in accordance with the applicable laws on their registered email id in due course.

For **Infosys Limited**
Sd/-
**A.G.S. Manikantha**
*Company Secretary*

Bengaluru, India
May 30, 2024

Infosys®
Navigate your next

## ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

# 43ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ, ಅಂತಿಮ ಮತ್ತು ವಿಶೇಷ ಲಾಭಾಂಶದ ಮಾಹಿತಿ ಸೂಚನೆ

1. ಕಂಪನಿಯ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ಇತರೆ ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ಬುಧವಾರ, ದಿನಾಂಕ ಜೂನ್ 26, 2024 ರಂದು ಸಂಜೆ ಭಾರತೀಯ ಕಾಲಮಾನ 4:00 ಗಂಟೆಗೆ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023, ದಿನಾಂಕ ಸೆಪ್ಟೆಂಬರ್ 25, 2023, ಇತರ ಅನ್ವಯವಾಗುವ ಎಲ್ಲ ಕಾನೂನುಗಳು ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು SEBI ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023 (ಇನ್ನು ಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ಅನ್ವಯ ಸಭೆಯ ಸೂಚನೆಯಲ್ಲಿ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲಾಗುವುದು.

2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಗಳ ವಿದ್ಯುನ್ಮಾನ ಪ್ರತಿಗಳನ್ನು ಮತ್ತು 2023-24ರ ಹಣಕಾಸು ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆಯನ್ನು (ಇ–ಮೇಲ್) ಯಾರು ನೋಂದಾಯಿಸಿದ್ದಾರೋ ಅಂತಹ ಷೇರುದಾರರ ವಿದ್ಯುನ್ಮಾನ ಅಂಚೆಗೆ ಕಳಿಸಲಾಗುವುದು. ಕಂಪನಿಯ ಷೇರುಗಳನ್ನು ಡೀಮೆಟೀರಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಅವರ ವಿದ್ಯುನ್ಮಾನ ಅಂಚೆ ಹಾಗೂ ದೂರವಾಣಿ ಸಂಖ್ಯೆಯನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಹಾಗೂ ಭೌತಿಕರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರಿಗೆ ವಿದ್ಯುನ್ಮಾನ ಅಂಚೆ einward.ris@kfintech.com ಮೂಲಕ ತಿಳಿಸಲು ಕೋರಲಾಗಿದೆ. ಕಂಪನಿಯ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು 2023-24ನೇ ಸಾಲಿನ ಸಂಯೋಜಿತ ಹಣಕಾಸು ವರದಿಯನ್ನು ಕಂಪನಿಯ ಜಾಲತಾಣ www.infosys.com, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ ಮತ್ತು ಎನ್‌ಎಸ್‌ಡಿಎಲ್‌ನ ಜಾಲತಾಣವಾದ https://www.evoting.nsdl.com ಇಲ್ಲಿಯೂ ಒದಗಿಸಲಾಗುವುದು.

3. ತಮ್ಮ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ನೋಟಿಸಿನಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಸದರಿ ಇ–ವೋಟಿಂಗ್ ಮಾಡಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟೀರಿಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು.

4. ದಿನಾಂಕ ಏಪ್ರಿಲ್ 18, 2024ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಾರ್ಚ್ 31, 2024ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಅಂತಿಮ ಲಾಭಾಂಶವನ್ನು ಪ್ರತಿ ಷೇರಿಗೆ ₹20/– ಮತ್ತು ಹೆಚ್ಚುವರಿಯಾಗಿ ₹8/– ವಿಶೇಷ ಲಾಭಾಂಶವನ್ನು ಶಿಫಾರಸು ಮಾಡಿದ್ದನ್ನು ಷೇರುದಾರರು ಗಮನಿಸಬಹುದಾಗಿದೆ. ಅಂತಿಮ ಮತ್ತು ವಿಶೇಷ ಲಾಭಾಂಶವನ್ನು ದಾಖಲಾತಿ ದಿನವು **ಮೇ 31, 2024** ಆಗಿರುತ್ತದೆ. ಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಅಂತಿಮ ಲಾಭಾಂಶವು ಮತ್ತು ವಿಶೇಷ ಲಾಭಾಂಶವನ್ನು ಒಪ್ಪಿಗೆಯಾದ ನಂತರ **ಜುಲೈ 1, 2024**ರಂದು ವಿವಿಧ ಮಾರ್ಗಗಳಲ್ಲಿ ವರ್ಗಾಯಿಸಲಾಗುವುದು. ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳಲ್ಲಿ (ಎಲ್ಲಿ ಷೇರುಗಳನ್ನು ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಏಜೆಂಟ್ (ಆರ್‌ಟಿಎ) ಬಳಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.

5. ಯಾವ ಷೇರುದಾರರು ತಮ್ಮ ಷೇರುಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಹೊಂದಿದ್ದಾರೆಯೊ ಅವರು ತಮ್ಮ ವಿಳಾಸ ಹಾಗೂ ಬ್ಯಾಂಕ್ ಖಾತೆಯ ವಿವರಗಳ ಬದಲಾವಣೆಯಾದ ಸೂಚನೆಗಳನ್ನು ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಿಗೆ ತಲುಪಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು, ಲಾಭಾಂಶವನ್ನು ಸಕಾಲದಲ್ಲಿ ಪಡೆದುಕೊಳ್ಳಲು ಹಾಗೂ ಸುತ್ತೋಲೆಗಳಿಗೆ ಅನುಗುಣವಾಗಿ ವಿದ್ಯುನ್ಮಾನ ತೇವಣಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಕೊರಲಾಗಿದೆ. ನಾವು ಷೇರುದಾರರನ್ನು ವಿದ್ಯುನ್ಮಾನ ತೇವಣಿ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ಉತ್ತೇಜಿಸುತ್ತೇವೆ.

6. ತಮ್ಮ ಇಮೇಲ್ ವಿಳಾಸ/ಬ್ಯಾಂಕ್ ಖಾತೆಯ ಆದೇಶವನ್ನು ನೋಂದಾಯಿಸಲು ಬಯಸುವ ಷೇರುದಾರರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು–

| | |
|---|---|
| **ಡಿಮೆಟಿರಿಯಲೈಸ್ಡ್ ಹೋಲ್ಡಿಂಗ್** | ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ. |
| **ಭೌತಿಕ ಹಿಡುವಳಿ** | einward.ris@kfintech.com ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಏಜೆಂಟ್ (ಆರ್‌ಟಿಎ) ಗಳೊಂದಿಗೆ ನಿಗದಿತ ನಮೂನೆ ISR-1 ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.<br>ಷೇರುದಾರರು ನಿಗದಿತ ನಮೂನೆಗಳನ್ನು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/investors-service.html ನಲ್ಲಿ ಡೌನ್‌ಲೋಡ್ ಮಾಡಬಹುದು.<br>ಷೇರುದಾರರು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/faqs.html ನಲ್ಲಿ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳನ್ನು (FAQ) ಉಲ್ಲೇಖಿಸಬಹುದು. |

7. ಹಣಕಾಸು ಕಾಯಿದೆ 2020ರಂತೆ ತಿದ್ದುಪಡಿಯಾದ ಆದಾಯ ತೆರಿಗೆ ಕಾಯಿದೆ, 1961ರ (ಐಟಿ ಕಾಯಿದೆ) ಅನ್ವಯ ಎಪ್ರಿಲ್ 1, 2020ರ ನಂತರ ಕಂಪನಿ ನೀಡಿದ ಅಥವಾ ವಿತರಿಸಲಾದ ಲಾಭಾಂಶಕ್ಕೆ ಷೇರುದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಕಂಪನಿಯು ಅಂತಿಮ ಮತ್ತು ವಿಶೇಷ ಲಾಭಾಂಶವನ್ನು ಪಾವತಿಸುವಾಗ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ. ಹೀಗೆ ಮೂಲದಲ್ಲಿ ತೆರಿಗೆಯನ್ನು ಹಿಡಿಯುವ ದರವನ್ನು ನಿಷ್ಕರ್ಷಿಸಲು ಅನುವಾಗುವಂತೆ ಕೆಳಗೆ ಸೂಚಿಸಲಾಗಿರುವ ಮೂಲದಾಖಲೆಗಳನ್ನು ಐಟಿ ಕಾಯಿದೆ ಅನುಸಾರ ಸಲ್ಲಿಸಲು ಕೋರಲಾಗಿದೆ.

   **ನಿವಾಸಿ ಷೇರುದಾರರಿಗೆ,** ಆದಾಯ ತೆರಿಗೆ ಕಾಯಿದೆಯ 1961ರ ಪರಿಚ್ಛೇದ 194ರ ಅನ್ವಯ ಈ ಕೆಳಕಂಡಂತೆ ಕಡಿತಗೊಳಿಸಲಾಗುವುದು.

| | |
|---|---|
| ಅಧಿಕೃತವಾದ ಪ್ಯಾನ್ ಸಂಖ್ಯೆ ಹೊಂದಿರುವ ಷೇರುದಾರರಿಗೆ | 10%* ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ |
| ಅಧಿಕೃತವಾದ ಪ್ಯಾನ್/ಪ್ಯಾನ್ ಸಂಖ್ಯೆ ಹೊಂದಿರದ ಷೇರುದಾರರಿಗೆ | 20% ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ |

   * ಹಣಕಾಸು ಕಾಯಿದೆ, 2021ರ ಪ್ರಕಾರ, ಸೆಕ್ಷನ್206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ. ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ ದರ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ.

   * ಆದಾಯ ತೆರಿಗೆ ಕಾಯಿದೆ ಪರಿಚ್ಛೇದ 139ಎಎ ಅನ್ವಯ ಪ್ಯಾನ್ ಸಂಖ್ಯೆ ಹೊಂದಿರುವ ಹಾಗೂ ಆಧಾರ್ ಹೊಂದಲು ಅರ್ಹನಾಗಿರುವ ವ್ಯಕ್ತಿಯು ತನ್ನ ಪ್ಯಾನ್ ಅನ್ನು ಆಧಾರ್‌ನೊಂದಿಗೆ ಜೋಡಿಸಬೇಕಾಗಿರುತ್ತದೆ. ಹಾಗೆ ಮಾಡದ ಸಂದರ್ಭಗಳಲ್ಲಿ ನೀಡಲಾದ ಪ್ಯಾನ್ ಅನರ್ಹ ಇಲ್ಲವೇ ನಿಷ್ಕ್ರಿಯ ಎಂದಾಗುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಲಾದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಮತ್ತು ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಿರುವಂತೆ ತೆರಿಗೆಯನ್ನು ಹೆಚ್ಚುವರಿ ದರದಲ್ಲಿ ಕಡಿತಗೊಳಿಸಲಾಗುತ್ತದೆ.

   ಆದಾಗ್ಯೂ, ಲಾಭಾಂಶ ಪಾವತಿಸಬೇಕಾದ ವ್ಯಕ್ತಿಗೆ ಆರ್ಥಿಕ ವರ್ಷ 2023-24ರಲ್ಲಿ ಲಾಭಾಂಶವು ₹5,000 ಮೀರದಿದ್ದಲ್ಲಿ ಹಾಗೂ ಷೇರುದಾರರು ನಮೂನೆ 15ಜಿ/ನಮೂನೆ 15ಎಚ್ (60ವರ್ಷ ವಯಸ್ಸನ್ನು ಮೀರಿದ ವ್ಯಕ್ತಿಗೆ ಅನ್ವಯಿಸುವಂತೆ) ಒದಗಿಸಿದವರಿಗೆ ಕಾಯಿದೆಯ ನಿಬಂಧನೆಗಳಿಗೆ ಒಳಪಟ್ಟಂತೆ ಯಾವುದೇ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ನಿವಾಸಿ ಷೇರುದಾರರು ಐಟಿ ಕಾಯಿದೆಯಲ್ಲಿ ಹೇಳಲಾದ ಇತರೆ ಯಾವುದೇ ದಸ್ತಾವೇಜನ್ನು ಒದಗಿಸಿ ಕಡಿಮೆ ದರದ ತೆರಿಗೆ ಕಡಿತ ಅಥವಾ ಪೂರ್ಣ ತೆರಿಗೆ ಕಡಿತವನ್ನು ಪಡೆಯಬಹುದಾಗಿರುತ್ತದೆ. ನಮೂನೆ 15ಜಿ/ನಮೂನೆ 15ಎಚ್ ಅಥವಾ ಮೇಲೆ ಹೇಳಿದ ಇತರೆ ದಸ್ತಾವೇಜನ್ನು ಒದಗಿಸುವ ಷೇರುದಾರಿಗೆ ಪ್ಯಾನ್ ಸಂಖ್ಯೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

   **ಅನಿವಾಸಿ ಷೇರುದಾರರಿಗೆ,** ಪರಿಚ್ಛೇದ 195 ಹಾಗೂ ಐಟಿ ಕಾಯಿದೆಯ ಅನ್ವಯವಾಗುವ ಇತರೆ ಪರಿಚ್ಛೇದಗಳ ಅನುಸಾರ ತೆರಿಗೆಗಳನ್ನು, ಚಾಲ್ತಿಯಲ್ಲಿರುವ ದರದಲ್ಲಿ ತಡೆಹಿಡಿಯಬೇಕಾಗಿರುತ್ತದೆ. ಈ ತೆರಿಗೆಯನ್ನು ತಡೆಹಿಡಿಯುವ ದರವು ಶೇ 20** (ಜೊತೆಗೆ ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್) ಅಥವಾ ಲಾಭಾಂಶದ ಮೊತ್ತದ ಮೇಲೆ ಭಾರತ ಸರ್ಕಾರ ಸೂಚಿಸಿರುವಂತೆ ಆಗಿರುತ್ತದೆ. ಆದರೂ, ಐಟಿ ಕಾಯಿದೆಯ ಪರಿಚ್ಛೇದ 90ರ ಪ್ರಕಾರ, ಅನಿವಾಸಿ ಷೇರುದಾರರು, ಬಹುಪಕ್ಷೀಯ ಒಪ್ಪಂದದಿಂದ (ಎಂಎಲ್‌ಐ) ಪರಿಗಣಿಸಲಾದ ದ್ವಿತೆರಿಗೆ ಪ್ರತಿಬಂಧಕ ಒಪ್ಪಂದವನ್ನು (ಡಿಟಿಎಎ) ಆಯ್ಕೆ ಮಾಡಿಕೊಂಡು ಭಾರತದ ಮತ್ತು ಷೇರುದಾರರು ವಾಸವಾಗಿರುವ ದೇಶದ ತೆರಿಗೆ ಇವುಗಳಲ್ಲಿ ಅವರಿಗೆ ಯಾವುದು ಹೆಚ್ಚು ಲಾಭಕರವೋ ಅದನ್ನು ಅನುಸರಿಸಲು ಅವಕಾಶವಿದೆ. ಇದಕ್ಕಾಗಿ, ಅಂದರೆ, ಡಿಟಿಎಎ ಸೌಲಭ್ಯವನ್ನು ಬಳಸಿಕೊಳ್ಳಲು, ಅನಿವಾಸಿ ಷೇರುದಾರರು ಈ ಕೆಳಕಂಡ ವಿವರಗಳನ್ನು ನೀಡಬೇಕಾಗುತ್ತದೆ:

   - ಭಾರತದ ಆದಾಯ ತೆರಿಗೆ ಇಲಾಖೆಯು ನೀಡಿದ, ಷೇರುದಾರರಿಂದ ಅನುಪ್ರಮಾಣಿತ ಪ್ಯಾನ್ ಕಾರ್ಡಿನ ಪ್ರತಿ ಅಥವಾ ಆದಾಯ ತೆರಿಗೆ ನಿಯಮಾವಳಿ 1962ರ ನಿಯಮ 37ಬಿಸಿರ ಅನ್ವಯ ವಿವರಗಳು.
   - ಆರ್ಥಿಕ ವರ್ಷ 2023-24ಕ್ಕೆ ಅನುಸಾರವಾದ ವಾಸವಿರುವ ದೇಶದ ಕಂದಾಯ/ತೆರಿಗೆ ಅಧಿಕಾರಿಗಳು ನೀಡಿರುವ, ಷೇರುದಾರರಿಂದ ಅನುಪ್ರಮಾಣಿತ ಟ್ಯಾಕ್ಸ್ ರೆಸಿಡೆನ್ಸಿ ಪ್ರಮಾಣಪತ್ರದ ಪ್ರತಿ.
   - ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್ ದಿನಾಂಕ ಜುಲೈ 16, 2022 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ 03/2022 ಅನ್ವಯ ನೀಡಲಾದ ವಿದ್ಯುನ್ಮಾನ ನಮೂನೆ 10ಎಫ್ [ಅಧಿಸೂಚನೆಯನ್ನು notification-no-3-2022-systems.pdf (incometaxindia.gov.in)ಯಲ್ಲಿ ನೋಡಬಹುದು. ಅನ್ನು ವಿದ್ಯುನ್ಮಾನ ರೂಪದಲ್ಲಿ ಇ–ಫೈಲಿಂಗ್ ಜಾಲತಾಣವಾದ https://www.incometax.gov.in/iec/foportal ಇಂದ ಪಡೆದುಕೊಳ್ಳಬಹುದಾಗಿರುತ್ತದೆ.
   - ಅನಿವಾಸಿಯು ತನಗೆ ಅನ್ವಯವಾಗುವ ತೆರಿಗೆ ಒಪ್ಪಂದದ ಅನುಸಾರವಿರುವ ಭಾರತದಲ್ಲಿ ಶಾಶ್ವತವಾಗಿ ನೆಲೆಯೂರಿರದ ಸ್ವಘೋಷಣಾ ಹೇಳಿಕೆ.
   - ಅನಿವಾಸಿ ಷೇರುದಾರನಿಂದ ಲಾಭದಾಯಕ ಮಾಲಿಕತ್ವದ ಸ್ವಘೋಷಣೆ.
   - ಐಟಿ ಕಾಯಿದೆಯಲ್ಲಿ ಕಡಿಮೆ ತೆರಿಗೆ ತಡೆಹಿಡಿಯುವಂತೆ ಇರುವ ಕಾನೂನಿನಲ್ಲಿ ಹೇಳಲಾದ ಯಾವುದೇ ಇತರ ದಸ್ತಾವೇಜು, ಅನ್ವಯವಾಗುವುದಾದಲ್ಲಿ, ಸ್ವಅನುಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು.

   ವಿದೇಶಿ ಸಾಂಸ್ಥಿಕ ಅಥವಾ ಪೋರ್ಟ್‌ಫೋಲಿಯೋ ವಿನಿಯೋಜಕರಾಗಿದ್ದಲ್ಲಿ ತೆರಿಗೆಯು ಆದಾಯ ತೆರಿಗೆ ಕಾಯಿದೆಯ ಪರಿಚ್ಛೇದ 196ಡಿ ಅನ್ವಯ ಶೇ 20**ರಂತೆ (ಅನ್ವಯವಾಗುವ ಸೆಸ್ ಹಾಗೂ ಸರ್‌ಚಾರ್ಜುಗಳೊಂದಿಗೆ) ಅಥವಾ ಎಂಎಲ್‌ಐ ಪರಿಷ್ಕೃತವಾದ ಡಿಟಿಎಎನಲ್ಲಿ ಒದಗಿಸಲಾದಂತೆ ಯಾವುದು ಹೆಚ್ಚು ಪ್ರಯೋಜನಕಾರಿಯೊ ಅದನ್ನು ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ ಕಡಿತಗೊಳಿಸಲಾಗುವುದು.

   ** ಹಣಕಾಸು ಕಾಯಿದೆ, 2021 ರ ಪ್ರಕಾರ, ಸೆಕ್ಷನ್ 206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ, ಇದರಲ್ಲಿ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ. ಇದನ್ನು ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದಾಗ್ಯೂ, ಅನಿವಾಸಿ ಷೇರುದಾರರು ಅಥವಾ ಅನಿವಾಸಿ ವಿದೇಶಿ ಬಂಡವಾಳ ಹೂಡಿಕೆದಾರ (ಎಫ್‌ಪಿಐ) / ವಿದೇಶಿ ಸಾಂಸ್ಥಿಕ ಹೂಡಿಕೆದಾರ (ಎಫ್‌ಐಐ), ಅಂತಹ ಅನಿವಾಸಿಗಳು ಭಾರತದಲ್ಲಿ ಖಾಯಂ ಸ್ಥಾಪನೆ ಆಗಿರದಿದ್ದರೆ, ಸೆಕ್ಷನ್ 206ಎಬಿ ಯಲ್ಲಿ ಉಲ್ಲೇಖಿಸಿರುವ ಹೆಚ್ಚಿನ ತೆರಿಗೆ ದರ ಅನ್ವಯಿಸುವುದಿಲ್ಲ.

   ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಷೇರುದಾರರ ಪೋರ್ಟಲ್ https://www.infosys.com/investors/shareholder-services/dividend-tax.html ಗೆ ಜೂನ್ 07, 2024 ದಿನಾಂಕದ ಒಳಗೆ ಸಲ್ಲಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸೂಚನೆಗಳು ಮತ್ತು ಮಾಹಿತಿಗಾಗಿ https://www.infosys.com/investors/shareholder-services/dividend-tax.html ಈ ಜಾಲತಾಣವನ್ನು ಸಂದರ್ಶಿಸಲು ಕೋರಲಾಗಿದೆ. ದಿನಾಂಕ ಜೂನ್ 07, 2024ರ ನಂತರ ತೆರಿಗೆ ತಡೆಹಿಡಿಯುವ ವಿಷಯವಾಗಿ ಯಾವುದೇ ಸಂವಹನ/ಸಂದೇಶಗಳನ್ನು ಸ್ವೀಕರಿಸಲಾಗುವುದಿಲ್ಲ.

   ಈ ವಿಷಯದ ಕುರಿತು ಯಾವುದೇ ಸ್ಪಷ್ಟೀಕರಣಕ್ಕಾಗಿ ಷೇರುದಾರರು dividend.tax@infosys.com ಗೆ ಬರೆಯಬಹುದು.

   ತೆರಿಗೆ ಕಡಿತಗೊಳಿಸಲಾದ ಪ್ರಮಾಣಪತ್ರಗಳು, ಯಾವುದಾದರೂ ಇದ್ದರೆ, ಷೇರುದಾರರ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಷೇರುದಾರರು ತಮ್ಮ ತೆರಿಗೆ ಕ್ರೆಡಿಟ್ ಅನ್ನು https://www.incometax.gov.in/iec/foportal ನಲ್ಲಿ ಇ–ಫೈಲಿಂಗ್ ಖಾತೆಯಿಂದ ಫಾರ್ಮ್ 26AS ನಲ್ಲಿ ಅಥವಾ https://www.tdscpc.gov ನಲ್ಲಿ "View Your Tax Credit" ಪರಿಶೀಲಿಸಬಹುದು.

8. 43ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಷೇರುದಾರರಿಗೆ ಅವರ ನೋಂದಾಯಿತ ವಿದ್ಯುನ್ಮಾನ ಅಂಚೆಗೆ ಅನ್ವಯವಾಗುವ ಕಾನೂನುಗಳ ಅನುಸಾರವಾಗಿ ಕಳಿಸಲಾಗುವುದು.

**ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ**
ಸಹಿ/–
**ಎ.ಜಿ.ಎಸ್. ಮಣಿಕಂಠ**
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಮೇ 30, 2024